# ಕೇಶವರೆಡ್ಡಿ ಹಂದ್ರಾಳ


ಚಿತ್ರ: ಚಂದ್ರಹಾಸ ಕೋಟೆಕಾರ್

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕಥೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. ಅವರು ಈ ತನಕ 10 ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರ ಮೊದಲ ಕಥಾ ಸಂಗ್ರಹ 'ಹಂದ್ರಾಳ'. 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳಾಗಿದ್ದು, ನಾಡಿನ ಓದುಗರ ಗಮನ ಸೆಳೆದಿವೆ.

ಅವರು ಪ್ರಬಂಧಗಳನ್ನೂ ಬರೆದಿದ್ದಾರೆ. 'ಒಕ್ಕಲ ಒನಪು', 'ಮರೆತ ಭಾರತ' ಅವರ ಜನಮೆಚ್ಚುಗೆಯನ್ನು ಪಡೆದ ಪ್ರಬಂಧ ಸಂಕಲನಗಳಾಗಿವೆ. ಸಿನಿಮಾ, ಧಾರವಾಹಿಗಳಿಗೂ ಅವರು ಕಥೆ, ಸಂಭಾಷಣೆಯನ್ನು ಬರೆದಿದ್ದಾರೆ. ಪ್ರಕಟಿತ ಪುಸ್ತಕಗಳು 15. ಇವುಗಳಲ್ಲಿ 'ನನ್ನ ಕ್ರಾಂತಿಯ ಹುಡುಗಿ' ಎಂಬ ಕವನ ಸಂಗ್ರಹವೂ ಸೇರಿದೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದ ಬಳಿಕ ಸರ್ಕಾರಿ ಪಿಯು ಕಾಲೇಜಿನಲ್ಲಿ ಕೆಲಕಾಲ ಉಪನ್ಯಾಸಕರಾಗಿ ಕೆಲಸ ಮಾಡಿದ್ದರು. ಆ ನಂತರ ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ವೃತ್ತಿಯನ್ನು ಆರಂಭಿಸಿದರು. ಪ್ರಸ್ತುತ ಅದೇ ಇಲಾಖೆಯಲ್ಲಿ ಬೆಂಗಳೂರಿನಲ್ಲಿ ಉಪ ಆಯುಕ್ತರಾಗಿದ್ದಾರೆ.

ಕೃಷಿ ಹಿನ್ನೆಲೆಯ ಕುಟುಂಬದಿಂದ ಬಂದ ಹಂದ್ರಾಳರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹಂದ್ರಾಳದವರು. ತಂದೆ ಸಂಜೀವರೆಡ್ಡಿ, ತಾಯಿ ವೆಂಕಟಮ್ಮ.

ಹಂದ್ರಾಳರು ಕನ್ನಡಪರ ಹೋರಾಟಗಳಿಂದ ಬೆಳೆದುಬಂದವರು. 1971ರಿಂದ ಅಂದರೆ, ಅವರ ವಿದ್ಯಾರ್ಥಿ ದೆಸೆಯಿಂದಲೂ ಬೆಂಗಳೂರಿನ ಎಲ್ಲ ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಬಂಡಾಯ, ದಲಿತ, ರೈತ ಹೋರಾಟಗಳಂತಹ ಜನಪರ ಹೋರಾಟಗಳಲ್ಲಿ ಅವರ ತೊಡಗಿಸಿಕೊಳ್ಳುವಿಕೆ ಇದ್ದೇ ಇತ್ತು.

**ಇತ್ಯಾದಿಗಳು ನನ್ನ ಕಣ್ಮುಂದೆ ಕುಣಿಯುತ್ತಿದ್ದವು. ಆದರೆ ಮೂರು ತಿಂಗಳಲ್ಲಿ ಬೆಂಗಳೂರಿನ ಹುಡುಗರನ್ನು ಮೀರಿಸುವಂತೆ ಆಟ ಪಾಠಗಳಿಗೆ ಹೊಂದಿಕೊಂಡಿದ್ದೆ. ಅದೂ ಇಂಗ್ಲಿಷ್ ಮೀಡಿಯಂನಲ್ಲಿ! ದಸರಾ ರಜ, ಬೇಸಿಗೆ ರಜ, ಕ್ರಿಸ್‌ಮಸ್ ರಜಗಳಲ್ಲಿ ಊರಿಗೆ ಮರಳಿ ಸಂಪೂರ್ಣವಾಗಿ ಮತ್ತೆ ಹಳ್ಳಿಗಾಮರನ ಪಾತ್ರದಲ್ಲಿ ತೂರಿಕೊಳ್ಳುತ್ತಿದ್ದೆ. ಕ್ರಮೇಣ ಹಳ್ಳಿ ಮತ್ತು ನಗರದ ಎರಡೂ ಪಾತ್ರಗಳಿಗೆ ಒಗ್ಗಿಕೊಂಡಿದ್ದೆ. ಹೈಸ್ಕೂಲಿನಲ್ಲಿರುವಾಗಲೇ ಎನ್. ನರಸಿಂಹಯ್ಯ, ಜಿಂದೆ ನಂಜುಂಡಸ್ವಾಮಿ, ಮಾ.ಭಿ.ಶೇ., ಟಿ.ಕೆ. ರಾಮರಾವ್ ಮುಂತಾದವರ ಕಾದಂಬರಿಗಳನ್ನು ಕಬ್ಬನ್‌ಪಾರ್ಕಿನ ಸೆಂಟ್ರಲ್ ಲೈಬ್ರರಿಯಲ್ಲಿ ಗಂಟೆಗಟ್ಟಲೆ ಕುಳಿತು ಓದುತ್ತಿದ್ದೆ.**

**ಇನ್ನು ಪಿ.ಯು.ಸಿ.ಯಲ್ಲಿದ್ದಾಗ ಡಾ. ಬೆಸಗರಹಳ್ಳಿ ರಾಮಣ್ಣನವರ 'ನೆಲದ ಸಿರಿ' ಮತ್ತು ಎಚ್. ದೇವೀರಪ್ಪನವರ 'ಬೆಳುವಲದ ಮಡಿಲಲ್ಲಿ' ಪುಸ್ತಕಗಳು ಪಠ್ಯವಾಗಿದ್ದವು. ಅವುಗಳ ಬಗ್ಗೆ ಪ್ರಬಂಧ ಬರೆದು ನಾನು ಪ್ರಥಮ ಬಹುಮಾನವನ್ನು ಗಳಿಸಿದ್ದೆ. ಆ ಪುಸ್ತಕಗಳು ಸೇಮ್ ಟು ಸೇಮ್**